**M.V.C.No.881/2023** **CW-1**

**ದಿನೇಶ್ ಜಿ ಕೆ** ಬಿನ್ ಜೆ ಸಿ ಕುಮಾರ್

ದಿನಾಂಕಃ **07/03/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ

ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿದ್ದು ನ್ಯಾಯಾಲಯದ ಆದೇಶದಂತೆ ಹಾಜರಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ.

ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಿಶಾನೆ ಸಿ-1- ಅರ್ಜಿದಾರರಾದ ಶೇಖರ್ ರವರಿಗೆ ಸಂಬಂಧಿಸಿದ ಹೊರರೋಗಿ ಚೀಟಿ ಪುಸ್ತಕ

ನಿಶಾನೆ ಸಿ-2- Discharge summary

ನಿಶಾನೆ ಸಿ-3 ಮತ್ತು 4- ಅರ್ಜಿದಾರರಿಗೆ ಸಂಬಂಧಿಸಿದ ಸಾರ್ವಜನಿಕ
ಆಸ್ಪತ್ರೆ ಹೊಳೇನರಸೀಪುರದಿಂದ ನೀಡಿರುವ 2 CT-scan filmಗಳು

ನಿಶಾನೆ ಸಿ-5 ರಿಂದ 8- 4 ಎಕ್ಸರೇ ಪ್ರತಿಗಳು

ಪಾಟೀ ಸವಾಲುಃ **2**ನೇ ಎದುರುದಾರರ ಪರವಾಗಿ ಶ್ರೀ ಸಿ ಹೆಚ್ ಸಿ ವಕೀಲರಿಂದಃ

1. ಎಕ್ಸರೇ ಫಿಲಂ ಗಳಲ್ಲಿ ಅದನ್ನು ತೆಗೆಸಿದ ದಿನಾಂಕವು ಕಂಪ್ಯೂಟರೈಸ್ಡ್ ನಮೂದಾಗುತ್ತದೆ ಆದರೆ manual ಮೂಲಕ ಎಕ್ಸರೇ ತೆಗೆದ ಫಿಲಂ ಗಳಲ್ಲಿ ದಿನಾಂಕ ನಮೂದು ಆಗುವುದಿಲ್ಲ. ನಿಸಿ-5 ರಿಂದ 8 ರ ಪೈಕಿ 2 ಎಕ್ಸರೇಗಳನ್ನು ದಿಃ 06-01-2023 ರಲ್ಲಿ ಒಂದನ್ನು, ದಿಃ 22-01-2023 ರಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೆಗೆಸಲಾಗಿದೆ ಎಂದರೆ ಸರಿ. ಆ ಎಕ್ಸರೇಗಳನ್ನು ಗಾಯಾಳು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಬೇರೆ ಆಸ್ಪತ್ರೆಯ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಆ ಆಸ್ಪತ್ರೆಯಿಂದ ದಾಖಲಾತಿಗಳನ್ನು ಪಡೆದುಕೊಂಡೇ ಹಾಜರುಪಡಿಸಬೇಕು ಎಂದರೆ ಸರಿ. ನಿಸಿ-3 ಮತ್ತು 4 ರ CT-scan ಗಳು ಸಹ

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೆಗೆಸಿದ ಸ್ಕ್ಯಾನ್ ಗಳು ಆಗಿರುತ್ತವೆ. ನಾನು ಸರ್ಕಾರಿ ಆಸ್ಪತ್ರೆ ವೈದ್ಯ ಎಂದರೆ ಸರಿ. ವಿಕ್ಟೋರಿಯಾ ಆಸ್ಪತ್ರೆಯ ದಾಖಲಾತಿಗಳನ್ನು ನನಗೆ ಹಾಜರುಪಡಿಸಲು ಅಧಿಕಾರ ಇಲ್ಲ ಆದರೆ non MLC ಪ್ರಕರಣಗಳಲ್ಲಿ ಹಾಜರಪಡಿಸಬಹುದು ಎಂದು ನುಡಿಯುತ್ತಾರೆ. ವಿಕ್ಟೋರಿಯಾ ಆಸ್ಪತ್ರೆಯಿಂದ ಅರ್ಜಿದಾರರು ಪಡೆದ xerox discharge summary ನನ್ನ ಬಳಿ ಇರುತ್ತದೆ. ನನ್ನ ಬಳಿ ಇರುವ Xerox discharge summary ಯಲ್ಲಿ ಗಾಯದ ಇತಿಹಾಸದ ಬಗ್ಗೆ ನಮೂದು ಇಲ್ಲ. ನಾನು ಹಾಜರುಪಡಿಸಿರುವ ನಿಸಿ-2 ರ ದಾಖಲಾತಿಯಲ್ಲಿ External fixation removed ಎಂದು ಬರೆಯಲಾಗಿದೆ. Discharge summary ಯಲ್ಲಿ ಚಿಕಿತ್ಸೆ ನೀಡಿದ ವಿವರವನ್ನು ಬರೆಯಲಾಗುತ್ತದೆ. External fixation ಅನ್ನು ಯಾವಾಗ remove ಮಾಡಲಾಗಿದೆ ಎಂದು ನಿಸಿ-2 ರಲ್ಲಿ ಬರೆಯಲಾಗಿಲ್ಲ. External fixation ಅನ್ನು ಯಾವಾಗ ತೆಗೆಯಲಾಯಿತು ಎಂಬ ಬಗ್ಗೆ ನಿಗಧಿತ ದಿನಾಂಕವನ್ನು ಹೇಳಲು ಆಗುವುದಿಲ್ಲ. 30 ನಿಮಿಷದ ಒಳಗಾಗಿ External fixation ಅನ್ನು ತೆಗೆಯಬಹುದು. External fixation ತೆಗೆದದ್ದನ್ನು ಹೊರತುಪಡಿಸಿ ನಾನು ಅರ್ಜಿದಾರರಿಗೆ ಬೇರೆ ಚಿಕಿತ್ಸೆ ನೀಡಿರುವುದಿಲ್ಲ. Discharge summary ಪ್ರಕಾರ External fixation ಅರ್ಜಿದಾರರಿಗೆ ಆಗಿತ್ತು. ಅರ್ಜಿದಾರನಿಗೆ ಆಗಿದ್ದ ಗಾಯದ ಬಗ್ಗೆ ಆತನ ಗಾಯದ ಪ್ರಮಾಣ ಪತ್ರವನ್ನು ನೋಡಿ ಆತನಿಗೆ ಯಾವ ರೀತಿ ಗಾಯಗಳು ಆಗಿದ್ದವು ಎಂದು ತಿಳಿದುಕೊಂಡಿದ್ದೇನೆ. ನಿಪಿ-4 ರ ಗಾಯದ ಪ್ರಮಾಣ ಪತ್ರದ ಆಧಾರದ ಮೇಲೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮಿಷನ್ ಅಪಘಾತದಿಂದ ಗಾಯ ಆಗಿದೆ ಎಂದು ಬರೆಸಿರುತ್ತೇನೆ. ಗಾಯವನ್ನು ಕಣ್ಣಾರೆ ನೋಡಿ ಅದರ ಅಂಗನ್ಯೂನ್ಯತೆ ಎಷ್ಟು ಇದೆ ಎಂದು ಹೇಳಲು ಆಗುವುದಿಲ್ಲ. ಗಾಯಾಳುವಿಗೆ ಚಿಕಿತ್ಸೆಯನ್ನು ನೀಡದೆ ಆತನ ಅಂಗನ್ಯೂನ್ಯತೆಯ ಪ್ರಮಾಣವನ್ನು ಹೇಳಲು ಆಗುವುದಿಲ್ಲ. ಅಂಗನ್ಯೂನ್ಯತೆಯ ಪ್ರಮಾಣವನ್ನು ಹೇಳಬೇಕೆಂದರೆ medical board ನಲ್ಲಿ ಪರೀಕ್ಷೆಗೆ ಒಳಪಡಿಸಿ ನ್ಯೂನ್ಯತೆ ಪ್ರಮಾಣವನ್ನು ಹೇಳಬೇಕು ಎಂದರೆ ಸರಿ. ಗಾಯಾಳುವನ್ನು ತಪಾಸಣೆಗೆ ಒಳಪಡಿಸಿ ಆತನಿಗೆ 89% ಅಂಗನ್ಯೂನ್ಯತೆ ಇದೆ ಎಂದು ಪ್ರಮಾಣ ಪತ್ರ ನೀಡಿದ್ದೇನೆ. ಅರ್ಜಿದಾರರನ್ನು medical board ಗೆ ಕಳುಹಿಸಿ ಆತನ ಅಂಗನ್ಯೂನತೆಯ ಪರೀಕ್ಷೆಗೆ ಒಳಪಡಿಸಿರುವುದಿಲ್ಲ. ಗಾಯಾಳುವಿಗೆ

ಚಿಕಿತ್ಸೆ ನೀಡದೆ ಇರುವ ವೈದ್ಯರು ಸಹ ಆತನನ್ನು ಪರೀಕ್ಷೆ ಮಾಡಿ ಅಂಗನ್ಯೂನತೆ ಹೇಳಬಹುದು, ಆದರೆ ಅದಕ್ಕೆ ಸಂಬಂಧಪಟ್ಟ ತಜ್ಞರು ನ್ಯೂನತೆ ಹೇಳಬಹುದು. Medical board ನ ತಪಾಸಣೆಗೆ ಒಳಪಡಿಸದೆಯೂ ಸಹ ಅಂಗನ್ಯೂನತೆ ಪ್ರಮಾಣವನ್ನು ಹೇಳಬಹುದು. ಅಂಗನ್ಯೂನ್ಯತೆಯನ್ನು ಪರಿಶೀಲನೆ ಮಾಡಲು ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಯ guidelines ಪ್ರಕಾರ ರೋಗಿಗೆ ಚಿಕಿತ್ಸೆ ನೀಡದ ಮತ್ತೊಬ್ಬ ತಜ್ಞ ವೈದ್ಯರು ಅಂಗನ್ಯೂನ್ಯತೆಯನ್ನು ಪರಿಶೀಲನೆ ಮಾಡಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡಬಹುದು. ನಮ್ಮ ಸರ್ಕಾರಿ ಆಸ್ಪತ್ರೆಯಲ್ಲಿ ಗಾಯಾಳುವನ್ನು ತಪಾಸಣೆಗೆ ಒಳಪಡಿಸಿ ಅಂಗನ್ಯೂನತೆ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ಗಾಯಾಳುವಿಗೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡುವ ಮೊದಲು ಆತನಿಗೆ ಚಿಕಿತ್ಸೆ ನೀಡಿದ್ದ ವೈದ್ಯರು ಏನೇನು ಚಿಕಿತ್ಸೆ ನೀಡಿದ್ದರು ಹಾಗೂ ಯಾವ ಔಷಧಗಳನ್ನು ನೀಡಿದ್ದರು ಎಂದು ಪರಿಶೀಲನೆ ಮಾಡಿ ಅದನ್ನು ನಮೂದಿಸಿ ಅಂಗನ್ಯೂನ್ಯತಾ ಪ್ರಮಾಣ ಪತ್ರ ನೀಡಲಾಗುತ್ತದೆ. ನಾನು ಅರ್ಜಿದಾರರಿಗೆ ಅಂಗನ್ಯೂನ್ಯತಾ ಪ್ರಮಾಣ ಪತ್ರ ನೀಡುವ ಮೊದಲು ಏನೇನು ಕ್ರಮಗಳನ್ನು ಕೈ ಗೊಂಡಿದ್ದೆ ಎಂಬ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡದೇ ಇರುವ ಕಾರಣ ಅಂಗನ್ಯೂನ್ಯತೆ ಪ್ರಮಾಣಪತ್ರ ನೀಡಿರುವುದು ತಪ್ಪು ಎಂದರೆ ಸರಿಯಲ್ಲ. ಎಲ್ಲಾ ಕ್ರಮಗಳನ್ನು ಅನುಸರಿಸಿ ಅಂಗನ್ಯೂನ್ಯತಾ ಪ್ರಮಾಣ ಪತ್ರ ನೀಡಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಚಿಕಿತ್ಸೆ ನೀಡದೇ ಇರುವ ವ್ಯಕ್ತಿಗೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಬಹುದು. ನಾನು ಚಿಕಿತ್ಸೆ ನೀಡದೇ ಇರುವ ವ್ಯಕ್ತಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ನಮ್ಮ ಇಲಾಖೆಯ ಅನುಮತಿ ಬೇಕು ಎಂದರೆ ಸರಿಯಲ್ಲ.

2. ನಾನು ಚಿಕಿತ್ಸೆ ನೀಡದೇ ಇರುವ ಅರ್ಜಿದಾರರಿಗೆ ಆತನನ್ನು ಪರೀಕ್ಷಿಸದೇ ಇದ್ದರೂ ಆತನಿಗೆ 89% ಅಂಗನ್ಯೂನ್ಯತೆ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಚಿಕಿತ್ಸೆ ನೀಡಿದಂತ ವೈದ್ಯರು ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿಯಬಹುದು ಎಂದರೆ ಸರಿ. ಅರ್ಜಿದಾರರಿಗೂ ನನಗೂ ಸಂಬಂಧ ಇರದೇ ಇದ್ದರೂ ಅವರೊಂದಿಗೆ ಶರೀಕಾಗಿ

ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ಸೃಷ್ಟಿಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ

1ನೇ ಎದುರುದಾರರು ಪ್ರತಿವಾದ ಪತ್ರ ಸಲ್ಲಿಸಿಲ್ಲ ಆದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು